

# ಕುಸುಮಾಕರ ದೇವರಗೆಣ್ಣೂರ
## (1930–2012)

ಕನ್ನಡದ ವಿಶಿಷ್ಟ ಕಾದಂಬರಿಕಾರ ಕುಸುಮಾಕರ ದೇವರಗೆಣ್ಣೂರ ಅವರ ಮೂಲ ಹೆಸರು ವಸಂತ ಅನಂತ ದಿವಾಣಜಿ. ಕನ್ನಡ ಕವಿ ದ.ರಾ. ಬೇಂದ್ರೆ ಅವರ ನಿಕಟ ಸಂಪರ್ಕ ವಸಂತ ದಿವಾಣಜಿ ಅವರಿಗೆ ಸುಮಾರು 12 ವರ್ಷಗಳ ಕಾಲ ಸೊಲ್ಲಾಪುರದಲ್ಲಿ ಸಿಕ್ಕಿತ್ತು. 'ಸೊಲ್ಲಾಪುರಕ್ಕೆ ಬಂದೊಡನೆ ಮಾಡಿದ ಮೊದಲ ಕೆಲಸ – ಬೇಂದ್ರೆಯವರನ್ನು ಕಂಡದ್ದು. ಅಂದಿನಿಂದ ಅಂದರೆ 1944ರಿಂದ 1956ರ ವರೆಗೆ – ಹನ್ನೆರಡು ವರುಷಗಳ ಈ ಒಂದು ಗಡುವನ್ನು, ಬೇಂದ್ರೆಯವರ ನಿಕಟ ಸಾನ್ನಿಧ್ಯದಲ್ಲಿ ಕಳೆದೆ. ತೀರ ಹತ್ತಿರದವನಾಗಿ ಅವರ ಮನೆಯವರಲ್ಲಿ ಒಬ್ಬನಾಗಿ ಬೆಳೆದೆ. ಸಂಬಂಧಿಯಂತಾಗಿ ಇದ್ದೆ. ಈ ಅವಧಿಯಲ್ಲಿ ಅವರು ನನ್ನ ಜೊತೆ ಸಾಕಷ್ಟು, ಹೇಳಬರಲಾರಷ್ಟು ಮಾತನಾಡಿದರು. ಹಲವಾರು ಸಂಗತಿಗಳನ್ನು ಕಲಿಸಿದರು. ಈ ಎಲ್ಲ ಮಾತುಗಳು ಸುಮಾರು ಐವತ್ತು ವರುಷಗಳ ಹಿಂದಿನವು. ಅವನ್ನೆಲ್ಲ ಶಬ್ದಗಳಲ್ಲಿ ಹಿಡಿದಿರುವ ಪ್ರಯತ್ನ ಇದು' ಎಂದು ಅವರು ಬೇಂದ್ರೆಯವರ ಕುರಿತ ಲೇಖನ 'ಬೇಂದ್ರೆಯವರೊಡನೆ...'ದಲ್ಲಿ ಬರೆದುಕೊಂಡಿದ್ದಾರೆ. ಇಲ್ಲಿ ಕೊಡಲಾಗಿರುವ ಪ್ರಸಂಗಗಳು ಬೇಂದ್ರೆಯವರ ವ್ಯಕ್ತಿತ್ವವನ್ನು, ಅದರ ಮಿಂಚನ್ನು, ಅವರ ವಾಗ್ವಿಲಾಸವನ್ನು ಹಿಡಿದಿಡುತ್ತವೆ.

ವಿಜಯಪುರ ಜಿಲ್ಲೆಯ ದೇವರಗೆಣ್ಣೂರನವರಾದ ವಸಂತ ದಿವಾಣಜಿ ಬರೆದ ಕಾದಂಬರಿಗಳು: 'ಮುಗಿಯದ ಕತೆ', 'ನಾಲ್ಕನೇ ಆಯಾಮ', 'ನಿರೀಂದ್ರಿಯ', 'ಪರಿಘ', 'ಬಯಲು–ಬಸಿರು'.
ಅನುವಾದಿತ ಕಾದಂಬರಿ: 'ದುರ್ದಮ್ಯ'
ಕವನ ಸಂಗ್ರಹ: 'ಸ್ವಪ್ನನೌಕೆ' ಪಿಎಚ್ ಡಿ.
ಮಹಾಪ್ರಬಂಧ: 'ಪ್ರಸಾದಯೋಗ'

ಸೂಚಿಸಿದ್ದರು. ಅದರಂತೆಯೇ ನಾನು ಅವರನ್ನು ರೈಲ್ವೆ ಸ್ಟೇಷನ್‌ನಲ್ಲಿ ಭೇಟಿಯಾದೆ, ಮುಂದಿನ ಪ್ರಯಾಣಕ್ಕೆ ಜತೆಯಾಗುವಂತೆ ತಿಳಿಸಿದರು. ಸರಿ ಎಂದೆ. ನಾನು ರೈಲ್ವೆ ಟಿಕೇಟ್ ತೆಗೆದುಕೊಂಡಿರಲಿಲ್ಲ. ಇಬ್ಬರೂ ರೈಲಿನಲ್ಲಿ ಪ್ರಯಾಣ ಮುಂದುವರಿಸಿದೆವು. ಟಿಕೇಟ್ ಕಲೆಕ್ಟರ್ ತಪಾಸಣೆಗಾಗಿ ಬಂದಾಗ ಬೇಂದ್ರೆಯವರು ತಮ್ಮ ರೈಲ್ವೆ ಟಿಕೇಟ್‌ಗಾಗಿ ಹುಡುಕಾಡತೊಡಗಿದರು. ಇಟ್ಟಿರುವ ಜಾಗ ಮರೆತುಬಿಟ್ಟಿದ್ದರು. ಟಿಕೇಟ್ ಕಲೆಕ್ಟರ್‌ಗೆ ಬೇಂದ್ರೆಯವರ ಬಗ್ಗೆ ತಿಳಿದಿತ್ತು. 'ನೀವು ಟಿಕೇಟ್ ಇಲ್ಲದೆ ಪ್ರಯಾಣ ಮಾಡುವವರಲ್ಲ, ನಾನು ನಿಮ್ಮನ್ನು ತಪಾಸಣೆ ಮಾಡುವುದಿಲ್ಲ' ಎಂದು ಹೇಳಿದ. ಬೇಂದ್ರೆಯವರೆಂದರು, 'ಸರಿಯಪ್ಪಾ, ನೀನೇನೋ ತಪಾಸಣೆ ಮಾಡುವುದಿಲ್ಲ. ಆದರೆ ನಾನು ಯಾವ ಊರಿನಲ್ಲಿ ಇಳಿಯಬೇಕು ಎಂಬುದು ಗೊತ್ತಿಲ್ಲವಲ್ಲ!' ಎಂದರು. ಆತ 'ನೀವು ಪ್ರಾಯಃ ಯಾವುದೋ ಭಾಷಣಕ್ಕೆಂದು ಹೋಗುತ್ತಿರುತ್ತೀರಿ, ಎಲ್ಲಿ ಜನ ಹಾರ ಹಿಡಿದುಕೊಂಡು ಕಾಯುತ್ತಿರುತ್ತಾರೋ ಅಲ್ಲಿ ಇಳಿಯಿರಿ'